ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ಅರಸೀಕೆರೆ,

**ಸಿ.ಸಿ. ನಂ.540/2017**

ಫಿರ್ಯಾದುದಾರರು : ಅರಸೀಕೆರೆ ನಗರ ಪೋಲೀಸ್

: ವಿರುದ್ಧ :

ಆರೋಪಿತರು 1. ಆನಂದ್ ಕೌಸಿಕ್ ಬಿನ್ ದತ್ತಾತ್ರಯ
43 ವರ್ಷ, ಕರಿಯಮ್ಮ ದೇವಸ್ಥಾನ ಎದುರು,
ಅರಸೀಕೆರೆ ಟೌನ್

ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರ ಮುಂದುವರೆದ ವಿಚಾರಣೆಃ-

ಪ್ರಶ್ನೆ-1. : ನ್ಯಾಯಾಲಯದಲ್ಲಿ ಈ ಕೇಸಿನ ಸಾಕ್ಷಿದಾರರು ನುಡಿದಿರುವ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿದ್ದೀರಾ?

ಹೌದು

ಉತ್ತರ :

ಪ್ರಶ್ನೆ-2 : ಫಾಸಾ-4 ನಾಗೇಶ್ ರವರು ತಮ್ಮ ಸಾಕ್ಷ್ಯದಲ್ಲಿ ದಿಃ05-06-2014 ರಂದು ಬೆಳಗ್ಗೆ 10-20 ಗಂಟೆಗೆ ನಾನು ನನ್ನ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಚಾಸಾ-1 ಹಾಗೂ ಚಾಸಾ-4 ರವರು ನನ್ನನ್ನು ಒಂದು ಧಾಳಿಗೆ ಹೋಗಬೇಕು ಎಂದು ತಿಳಿಸಿದರು. ಸದರಿ ಧಾಳಿಯು ಬಿ.ಹೆಚ್.ರಸ್ತೆಯಲ್ಲಿರುವ ಫ್ರೆಂಡ್ಸ್ ಡಿ.ವಿ.ಡ್ ಕಾರ್ನರ್ ಮೇಲೆ ಮಾಡಬೇಕು ಎಂದು ತಿಳಿಸಿದರು. ನನ್ನ ಮೇಲಾಧಿಕಾರಿಗಳು ತಿಳಿಸಿದ ಪ್ರಕಾರ ಪರವಾನಗೆ ಇಲ್ಲದೇ ಕಳ್ಳತನದ ಡಿ.ವಿ.ಡಿ. ಗಳನ್ನು ಮಾರುತ್ತಿರುವ ಬಗ್ಗೆ ನನಗೆ ಗೊತ್ತಾಯಿತೆಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ-3 : ಸದರಿ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಚಾಸಾ-4 ರವರು ಈ ಕೇಸಿನ ಪಂಚ ಸಾಕ್ಷಿಗಳಾದ ಮಂಜುನಾಥ ಹಾಗೂ ಇನ್ನೊಬ್ಬ ವ್ಯಕ್ತಿಯನ್ನು ಕರೆದುಕೊಂಡು ಬಂದರು. ಆ ನಂತರ ನಾನು ಚಾಸಾ-1, 2, 4, 5 ಹಾಗೂ ಇನ್ನೊಬ್ಬ ಮಹಜರ್ ಸಾಕ್ಷಿ ಧಾಳಿಗೆ ನಮ್ಮ ಠಾಣೆಯನ್ನು ಬಿಟ್ಟು 10-30 ಗಂಟೆಗೆ ಘಟನಾ ಸ್ಥಳವನ್ನು ತಲುಪಿದೆವು. ನಾವು ಪಿ.ಐ ಜೀಪ್ ನಲ್ಲಿ ಧಾಳಿಗೆ ಹೋದೆವು. ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ-4 : ಸದರಿ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಾವು ಸದರಿ ಅಂಗಡಿಯ ಒಳಗೆ ಹೋಗಿ ನೋಡಿದಾಗ ನ್ಯಾಯಾಲಯದ ಮುಂದಿರುವ

ಆರೋಪಿ ಅಲ್ಲಿದ್ದ ಆತನ ಹೆಸರನ್ನು ವಿಚಾರಿಸಿದಾಗ ಅವನು ತನ್ನ ಹೆಸರು ಗುಲ್ಷನ್ ಎಂದು ತಿಳಿಸಿದ ಆರೋಪಿತನ ಅಂಗಡಿಯಲ್ಲಿ ಡಿವಿಡಿಗಳನ್ನು ಇನ್ಸಪೆಕ್ಟರ್ ರವರು ಡಿವಿಡಿ ಪ್ಲೇಯರ್ ನಲ್ಲಿ ಹಾಕಿದರು. ನಮ್ಮ ಪಿ.ಐ ರವರಿಗೆ ಸದರಿ ಡಿವಿಡಿ ನಕಲಿ ಡಿವಿಡಿ ಎಂದು ಗೊತ್ತಾಯಿತು. ನಮ್ಮ ಪಿಐರವರು 10 ಡಿವಿಡಿಗಳನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಪಿ.ಐರವರು ಸದರಿ 10 ಡಿವಿಡಿಗಳನ್ನು ತೆಗೆದುಕೊಳ್ಳುವಾಗ ಅಲ್ಲಿ ಒಂದು ಮಹಜರನ್ನು ಬರೆದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ-5 : ಸದರಿ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಮಹಜರ್ ಗೆ ಎ.ಎಸ್,ಐ ರವರು ಸಹಿ ಹಾಕಿರುತ್ತಾರೆ. ಇಬ್ಬರು ಪಂಚರು ಕೂಡ ಮಹಜರ್ ಗೆ ಸಹಿ ಯನ್ನು ಹಾಕಿದರು. ನನಗೆ ಸದರಿ ಡಿ.ವಿ.ಡಿ. ಗಳನ್ನು ತೋರಿಸಿದರೆ ನಾನು ಗುರುತು ಹಿಡಿಯಬಲ್ಲೆ. ಮಹಜರ್ ಸಮಯದಲ್ಲಿ ಸದರಿ ಸಿ.ಡಿ.ಗಳನ್ನು ಕವರ್ ನಲ್ಲಿ ಹಾಕಿ ತಮ್ಮ ವಶಕ್ಕೆ ಪಡೆದಿದ್ದರು. ಈಗ ಸದರಿ ಸಿ.ಡಿ.ಗಳನ್ನು ನೋಡಿದ್ದು ಅವುಗಳನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ. ನಾನು ಈ ಬಗ್ಗೆ ತನಿಖಾಧಿಕಾರಿಗೆ ನನ್ನ ಹೇಳಿಕೆ ಕೊಟ್ಟಿರುತ್ತೇನೆ. ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ-4 : ಪ್ರಾಸಾ-5 ಚಂದ್ರಶೇಖರ್ ತಮ್ಮ ಸಾಕ್ಷ್ಯದಲ್ಲಿ ದಿಃ 05.06.2016 ರಂದು ನಾನು ಕರ್ತವ್ಯದಲ್ಲಿದಾಗ ಚಾ.ಸಾ 1 ರವರು ನನ್ನನ್ನು ಹಾಗೂ ಚಾ.ಸಾ 5 ರವರನ್ನು ಕರೆದುಕೊಂಡು ಅರಸೀಕೆರೆ ಬಿ.ಹೆಚ್ ರಸ್ತೆಯಲ್ಲಿ ಯಾವುದೆ ಲೈಸನ್ಸ್ ಇಲ್ಲದೆ ನಕಲಿ ಕ್ಯಾಸೆಟ ಗಳನ್ನು ಮಾರಾಟ ಮಾಡುತ್ತಿದ್ದಾರೆ ದಾಳಿಯ ಸಮಯದಲ್ಲಿ ಸಹಕರಿಸಲು ಕೋರಿದರು. ನಮ್ಮ ಬಾತ್ಮಿದಾರರ ಮುಖಾಂತರ ಚಾ.ಸಾ 1 ರವರು ಚಾ.ಸಾ 2 ಮತ್ತು 3 ರವರಿಗೆ ದಾಳಿಯ ಮಾಹಿತಿಯನ್ನು ಕೊಟ್ಟು, ಪಂಚ ಸಾಕ್ಷಿಗಳಾಗಿ ಸಹಕರಿಸಲು ಕೋರಿದರು. ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ-5. : ಸದರಿ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅನಂತರ ನಾವು ಆರೋಪಿಯ ಅಂಗಡಿಯನ್ನು ಪರಿಶೀಲನೆ ಮಾಡಿದಾಗ ನಮಗೆ 10 ನಕಲಿ ಡಿವಿಡಿ ಗಳು ಸಿಕ್ಕಿರುತ್ತವೆ. ನಾವು ಆರೋಪಿಯನ್ನು ಈ ಬಗ್ಗೆ ವಿಾರಿಸಿದಾಗ ಅದು ನಕಲಿ ಎಂದು ಅವರು ಒಪ್ಪಿಕೊಂಡರು ಬೆಳಿಗ್ಗೆ 10.30 ರಿಂದ 12.00 ಗಂಟೆಯವರೆಗೆ ಮಹಜರನ್ನು ಮಾಡಲಾಯಿತು ನಾನು ಸದರಿ ಮಹಜರಗೆ ನಿ.ಪಿ 1 ಡಿ ಪ್ರಕಾರ ಸಹಿ ಹಾಕಿದೆ ಮಹಜರಡಿಯಲ್ಲಿ 10 ಡಿವಿಡಿ ಗಳನ್ನು ಜಪ್ತು ಮಾಡಲಾಯಿತು. ಸದರಿ ಡಿವಿಡಿಗಳನ್ನು ಮು.ಮಾ 1 ಎಂದು ಗುರುಸಲಾಗಿದೆ. ಮು.ಮಾ 1 ಹಾಗೂ ಆರೋಪಿಯೊಡನೆ ಠಾಣೆಗೆ ಬಂದೇವು ಚಾ.ಸಾ 1 ರವರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ-6. : ಪ್ರಾಸಾ-6 ಸದರಿ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ದಿಃ 05.06.2014 ರಂದು ನಾನು ಬೆಳಿಗ್ಗೆ 1 ಗಂಟೆಯಲ್ಲಿ ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದಾಗ ನನಗೆ ಒಂದು ಖಚಿತ ವಾರ್ತೆ ಬಂದಿರುತ್ತದೆ. ಅರಸೀಕೆರೆ ಬಿ.ಹೆಚ್ ರಸ್ತೆಯಲ್ಲಿ ಯಾವುದೆ ಲೈಸನ್ಸ್ ಇಲ್ಲದೆ ನಕಲಿ ಕ್ಯಾಸೆಟ ಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದು ನನಗೆ ತಿಳಿದು ಬಂತು. ಅನಂತರ ನಾನು ಚಾ.ಸಾ 2 ಮತ್ತು ರವರನ್ನು ಠಾಣೆಗೆ ಬರಮಾಡಿಕೊಂಡು ದಾಳಿಯ ವಿಷಯವನ್ನು ಅವರಿಗೆ ತಿಳಿಸಿದ್ದು ಹಾಗೂ ಚಾ.ಸಾ 2 ಮತ್ತು 3 ರವರು ದಾಳಿಯ ಸಮಯದಲ್ಲಿ ಮಹಜರಗೆ ಸಾಕ್ಷಿಯಾಗಲು ಒಪ್ಪಿದರು. ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ ಸುಳ್ಳು

ಪ್ರಶ್ನೆ-7. ಚಾ.ಸಾ 2 ರಿಂದ 5 ರವರು ದಾಳಿಗೆ ಹೋದಾಗ ಸದರಿ ಅಂಗಡಿಯ ಮಾಲೀಕ ಗುಲ್ಷನ್ ಅಂಗಡಿಯಲ್ಲಿದ್ದರು. ಅವರಗೆ ಸಿಡಿಗಳ ಬಗ್ಗೆ ವಿಚಾರಣೆ ಮಾಡಿದಾಗ ಅವರು ನಕಲಿ ಸಿಡಿಗಳು ಇರುವ ಬಗ್ಗೆ ಒಪ್ಪಿಕೊಂಡರು. ಅವುಗಳನ್ನು ಡಿವಿಡಿ ಪ್ಲೇರ್ ನಲ್ಲಿ ಹಾಕಿ ನೋಡಿದಾಗ ನಮಗೆ ಅದು ನಕಲಿ ಡಿವಿಡಿ ಗಳು ಎಂದು ಗೊತ್ತಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ-8. : ಸದರಿ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅನಂತರ ಕನ್ನಡ ಸಿನಿಮಾಗಳ ನಕಲಿ ಡಿವಿಡಿಗಳನ್ನು ಪಂಚರ ಸಮಕ್ಷಮ ಮಹಜರ ಕ್ರಮವನ್ನು ಜರುಗಿಸಿ ನಾವು ಜಪ್ತು ಮಾಡಿರುತ್ತೇವೆ. ಬೆಳಿಗ್ಗೆ 10.30 ರಿಂದ 12 ಗಂಟೆಯವರೆಗೆ ನಾನು ಮಹಜರನ್ನು ಮಾಡಿದೆ. ನಾನು ನಿ.ಪಿ 1 ಕ್ಕೆ ಸಹಿ ಹಾಕಿರುತ್ತೇನೆ. ನಾನು ಆರೋಪಿತನನ್ನು ಹಾಗೂ ಜಪ್ತು ಮಾಡಿದ ಡಿವಿಡಿಗಳನ್ನು ತೆಗೆದುಕೊಂಡು ಠಾಣೆಗೆ ಬಂದಿರುತ್ತೇವೆ. ಅನಂತರ ನಾನು ಸರ್ಕಾರಿ ತರ್ಫೆ ದೂರನ್ನು ಕೊಟ್ಟಿರುತ್ತೇನೆ. ಅನಂತರ ನಾನು ಠಾಣಾ ಗ್ನು ನಂ. 130/2014 ನ್ನು ದಾಖಲು ಮಾಡಿರುತ್ತೇನೆ. ನಾನು ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ-9. : ಸದರಿ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅನಂತರ ಆರೋಪಿಗೆ ನಾನು ಚಾ.ಸಾ 2 ರಿಂದ 5 ಇವರ ಹೇಳಿಕೆಗಳನ್ನು ಪಡೆದುಕೊಂಡು ದಿಃ 14.07.2014 ರಂದು ನಾನು ಚಾ.ಸಾ 6 ಇವರ ಮುಖಾಂತರ ಜಪ್ತಾದ ಡಿವಿಡಿಗಳನ್ನು ಚಾ.ಸಾ 7 ಇವರ ಅಂಗಡಿಗೆ ಸದರಿ ಡಿವಿಡಿಗಳು ಅಸಲಿ ಅಥವಾ ನಕಲಿ ಡಿವಿಡಿಗಳು ಎಂದುಜ ಪರೀಲನೆ ಮಾಡಲು ಕಳುಹಿಸಿಕೊಟ್ಟೆ.

ಸದರಿ ಡಿವಿಡಿಗಳು ನಕಲಿ ಡಿವಿಡಿಗಳು ಎಂದು ನಿ.ಪಿ 4ರ ಪ್ರಕಾರ ವರದಿಯನ್ನು ಕೊಟ್ಟಿರುತ್ತಾರೆ. ನಾನು ಅದೆ ದಿನ ಚಾ.ಸಾ 6 ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ತನಿಖೆಯು ಪೂರ್ಣಗೊಂಡಿದ್ದರಿಂದ ನಾನು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ:10. : ಈ ಪ್ರಕರಣದ ಬಗ್ಗೆ ನೀವೇನಾದರೂ ಹೇಳುವುದಿದೆಯಾ?

ಉತ್ತರ : ಇಲ್ಲ

ಪ್ರಶ್ನೆ:11. : ನಿಮ್ಮ ಪರವಾಗಿ ಸಾಕ್ಷ್ಯ ಇದೆಯಾ ?

ಉತ್ತರ : ಇಲ್ಲ

ಆ (ಆರೋಪಿತನಿಗೆ ಮೇಲ್ಕಂಡ ಸಾಕ್ಷ್ಯವನ್ನು ಓದಿ, ಹೇಳಿದ ನಂತರ ಅವರು ನೀಡಿದ ಉತ್ತರವನ್ನು ನನ್ನ ಸ್ವಹಸ್ತಾಕ್ಷರದಲ್ಲಿ ತೆರೆದ ನ್ಯಾಯಾಲಯದಲ್ಲಿ ನಮೂದಿಸಿರುವುದಾಗಿ
ದ ದೃಢೀಕರಿಸಿದೆ)

( ಅನಿತ ಜಿ. )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.